# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1661 |
| ಸದಸ್ಯರ ಹೆಸರು | : ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 20.03.2020 |
| ಉತ್ತರಿಸುವವರು | : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನಗಳ ಪೈಕಿ ಕ್ರಮಬದ್ಧ ನಿವೇಶನಗಳು ಹಾಗೂ ಕ್ರಮಬದ್ಧವಲ್ಲದ ನಿವೇಶನಗಳು ಅಂದರೆ ಏನು (ವಿವರವಾರು ಮಾಹಿತಿ ನೀಡುವುದು) | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಿಯಮಾನುಸಾರ ಇರುವ ಆಸ್ತಿಗಳು ಕ್ರಮಬದ್ಧ ಆಸ್ತಿಗಳಾಗಿರುತ್ತವೆ. ನಿಯಮಾನುಸಾರ ಇಲ್ಲದಿರುವ ಆಸ್ತಿಗಳು ಕ್ರಮಬದ್ಧವಲ್ಲದ ಆಸ್ತಿಗಳಾಗಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.<br><br>**<u>ಕ್ರಮಬದ್ಧ ಆಸ್ತಿಗಳು :</u>**<br><br>1. ಗ್ರಾಮ ಠಾಣಾ ಒಳಗಡೆ ಇರುವ ಆಸ್ತಿಗಳು.<br>2. ಕಂದಾಯ ಇಲಾಖೆಯಿಂದ ಭೂ ಪರಿವರ್ತನೆಯಾಗಿ ಸಕ್ಷಮ ಪ್ರಾಧಿಕಾರಗಳಿಂದ ಲೇಔಟ್ ಪ್ಲಾನ್ ಅನುಮೋದನೆಗೊಂಡಿರುವ ಆಸ್ತಿಗಳು.<br>3. ಸರ್ಕಾರದ ವಸತಿ ಯೋಜನೆಗಳಾದ ಬಸವ ವಸತಿ, ಗ್ರಾಮೀಣ ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಸೃಜಿಸರುವ ಆಸ್ತಿಗಳು.<br>4. ಏಕ ನಿವೇಶನ ನಕ್ಷೆ ಅನುಮೋದನೆಯಾಗಿರುವ ಆಸ್ತಿಗಳು (ಸಿಂಗಲ್ ಸೈಟ್ ಲೇಔಟ್ ಪ್ಲಾನ್ ಅಪ್ರೂವಲ್)<br>5. ಕೈಗಾರಿಕ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾದ ಆಸ್ತಿಗಳು.<br>6. ವಾಣಿಜ್ಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು<br>7. ಬಹು ಅಂತಸ್ತು ವಸತಿ ಸಮುಚ್ಚಯ (ಅಪಾರ್ಟ್‌ಮೆಂಟ್) – ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವ ಆಸ್ತಿಗಳು.<br>8. ದಿನಾಂಕ:16–11–1992 ಕ್ಕಿಂತ ಪೂರ್ವದಲ್ಲಿ ಮಂಡಲ / ಗ್ರಾಮ ಪಂಚಾಯತಿಗಳಿಂದ ಬಡಾವಣೆ ಎಂದು ಅನುಮೋದನೆಯಾಗಿರುವ ಆಸ್ತಿಗಳು.<br>9. ದಿನಾಂಕ:11–11–2014 ರ ನಂತರ ತಾಲ್ಲೂಕು ಪಂಚಾಯತಿಗಳಿಂದ ಅನುಮೋದನೆಯಾಗಿರುವ ಬಡಾವಣೆ ಆಸ್ತಿಗಳು (ಒಂದು ಎಕರೆಗಿಂತ ಕಡಿಮೆ ವಿಸ್ತೀರ್ಣವಿದ್ದಲ್ಲಿ)<br>10. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ BDA, BMRDA, BIAAPA, KHB, KIADB, UDA's & LPA's ಅನುಮೋದಿಸಿದ ಬಡಾವಣೆಗಳಲ್ಲಿ ಬರುವ ಆಸ್ತಿಗಳು.<br><br>**<u>ಕ್ರಮಬದ್ಧವಲ್ಲದ ಆಸ್ತಿಗಳು :</u>**<br><br>1. ಕಂದಾಯ ಭೂಮಿಯಲ್ಲಿ ಮನೆ ನಿರ್ಮಿಸಿದ್ದರೆ ಪಹಣಿ ಪ್ರತಿ<br>2. ಮನೆ ನಿರ್ಮಿಸಿರುವುದಕ್ಕೆ ವಿದ್ಯುತ್ ಬಿಲ್ ಪಾವತಿಸಿರುವ ದೃಢೀಕರಣ<br>3. ಕಂದಾಯ ಭೂಮಿಯಲ್ಲಿ ಫಾರಂ ಹೌಸ್ ನಿರ್ಮಿಸಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರ್ / ರೆವೆನ್ಯೂ ಇನ್ಸ್‌ಪೆಕ್ಟರ್ ರವರಿಂದ ದೃಢೀಕರಣ ಪತ್ರ |

| | | |
|---|---|---|
| | | 4. ಭೂ ಪರಿವರ್ತನೆಯಾಗಿದ್ದು, ಲೇಔಟ್ ಅನುಮೋದನೆಯಾಗದಿದ್ದಲ್ಲಿ ಈಗಾಗಲೇ ದಿನಾಂಕ: 14-06-2013 ಕ್ಕಿಂತ ಮುಂಚೆ ಒಂದು, ಎರಡು ಅಥವಾ ಮೂರು ಬಾರಿ ಕ್ರಯವಾಗಿರುವ ನಿವೇಶನಗಳಿಗೆ ಸಂಬಂಧಿಸಿದ ಕ್ರಯ ಪತ್ರ<br>5. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95(2) ರನ್ವಯ ತಹಶೀಲ್ದಾರ್‌ರವರು ನೀಡಿರುವ ಹಿಂಬರಹದ ಪ್ರತಿ. |
| (ಆ) | ಕ್ರಮಬದ್ಧವಾದ ಮತ್ತು ಕ್ರಮಬದ್ಧವಲ್ಲದ ನಿವೇಶನಗಳಿಗೆ ಪಂಚಾಯತಿ ವತಿಯಿಂದ ನೀಡುತ್ತಿರುವ ದಾಖಲೆ ಯಾವುವು; (ವಿವರವಾದ ಮಾಹಿತಿ ನೀಡುವುದು) | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಸಂಬಂಧಿಸಿದಂತೆ ಆಸ್ತಿ ವಿವರವನ್ನು ನಮೂನೆ 9 ರಲ್ಲಿ ಹಾಗೂ ಆ ಆಸ್ತಿಯ ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳನ್ನು ನಮೂನೆ 11 ಎ ರಲ್ಲಿ ಹಾಗೂ ಕ್ರಮಬದ್ಧವಲ್ಲದ ಆಸ್ತಿಗಳ ವಿವರವನ್ನು ನಮೂನೆ-11ಬಿ ರಲ್ಲಿ ನೀಡಲಾಗುತ್ತಿದೆ. |
| (ಇ) | ಕಂದಾಯ ನಿವೇಶನ ಅಂದರೆ ಏನು; ಇವುಗಳಿಗೆ ಪಂಚಾಯತಿ ವತಿಯಿಂದ ನೀಡುತ್ತಿರುವ ದಾಖಲೆ ಯಾವುದು; ಇವುಗಳ ನೋಂದಣಿಯನ್ನು ಸ್ಥಗಿತಗೊಳಿಸಿರುವುದು ನಿಜವೇ; | The Karnataka Regularization of Unauthorized Constructions in Urban Areas Act 1991 ರಲ್ಲಿ ಕಂದಾಯ ನಿವೇಶನವನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.<br>Revenue Site: Means a Site formed without approval under the relevant law relating to town and country planning or the erection of building on land which has not been diverted in accordance with section 95 of the Karnataka Land Revenue Act 1964.<br><br>ಮೇಲಿನ (ಆ) ರಲ್ಲಿ ತಿಳಿಸಿರುವಂತೆ ಕ್ರಮಬದ್ಧವಲ್ಲದ ಆಸ್ತಿಗಳಿಗೆ ಗ್ರಾಮ ಪಂಚಾಯತಿಯಿಂದ ನಮೂನೆ-11ಬಿ ನೀಡಲಾಗುತ್ತಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 344 ಮುನೋಮು, 2008 ದಿನಾಂಕ:06-04-2009 ರಂತೆ ನಿವೇಶನಗಳ ನೋಂದಣಿಗೆ ನಿಗಧಿಪಡಿಸಿರುವ ಅಗತ್ಯವಾದ ದಾಖಲೆಗಳನ್ನು ಪಕ್ಷಕಾರರು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಹಾಜರುಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 06 ಮುನೋಮು 2013, ದಿನಾಂಕ:18-07-2014 ರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಾಯಿಸಲಾಗುತ್ತಿದೆ. |
| (ಈ) | ಸ್ಥಗಿತಗೊಳಿಸಿರುವ ಕಂದಾಯ ನಿವೇಶನಗಳ ನೋಂದಣಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಇದಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು? | ಮೇಲ್ಕಂಡ ಸರ್ಕಾರದ ಸುತ್ತೋಲೆಗಳನ್ವಯ ದಾಖಲಾತಿಗಳನ್ನು ಹಾಜರುಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದೆ. |

ಸಂ. ಗ್ರಾಅಪ 318 ಗ್ರಾಪಂಅ 2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು